# ನಿಮ್ಮ ಹೊಸ ಜೀವಿತ



# ಹೊಸ ಜೀವಿತ

ಎಲ್. ಜೀಟರ್ ವಾಕರ್

INTERNATIONAL CORRESPONDENCE INSTITUTE
P.O. BOX 5036, BANGALORE-560 001

# ವಿಷಯ ಸೂಚಿಕೆ


| ಪಾಠ | | ಪುಟ |
|---|---|---|
| | ಮೊದಲು ಒಂದು ಮಾತು ಮಾತಾಡೋಣ...... ......... | 5 |
| 1. | ಹೊಸ ಜೀವಿತವನ್ನು ಪ್ರಾರಂಭಿಸಿರಿ ......... ......... | 8 |
| 2. | ನಡೆಯುವುದನ್ನು ಕಲಿಯುವುದು ......... ......... | 18 |
| 3. | ನಮ್ಮ ಸ್ವರ್ಗದ ತಂದೆಗೆ ಕಿವಿಗೊಡಿರಿ ......... ......... | 31 |
| 4. | ನೀವು ಬೆಳೆಯಲು ಬಯಸಿದ್ದೀರೋ? ......... ......... | 43 |
| 5. | ಹೊಸ ಜೀವಿತ - ಹೊಸ ಕಾರ್ಯ ಚಟುವಟಿಕೆಗಳು .... | 53 |
| 6. | ಹೊಸ ಅಳತೆಯ ಮಟ್ಟಗಳು ......... ......... | 68 |
| 7. | ನಮಗೊಬ್ಬ ಸಹಾಯಕನಿದ್ದಾನೆ ......... ......... | 75 |
| 8. | ನಿಮ್ಮ ಜೀವಿತವು ಬೆಳಕಾಗಿದೆ ......... ......... | 85 |
| 9. | ಒಂದು ಮನೆಯನ್ನು ಸಂತೋಷವಾಗಿ ಮನೆಯನ್ನಾಗಿರಿಸಿಕೊಳ್ಳುವುದು ಹೇಗೆ ......... ......... | 98 |
| 10. | ನಿಮ್ಮ ಹೊಸ ಸ್ವಾತಂತ್ರ್ಯ ......... ......... | 10[illegible] |



Copy Right 1983 All Rights Reserved
International Correspondence Institute
Brussels, Belgium


D/1984/2145/158

# ಮೊದಲು ಒಂದು ಮಾತು ಮಾತಾಡೋಣ



ನೀವು ಅಭ್ಯಾಸವನ್ನು ಪ್ರಾರಂಭಿಸುವ ಮೊದಲು ಒಂದು ಮಾತು ಮಾತಾಡೋಣ. ನೀವು ಎಲ್ಲಿದ್ದರೂ ಈ ವಿಶೇಷವಾದ ಪುಸ್ತಕವು ನೀವು ಅಭ್ಯಾಸಿಸಲು ಸಹಾಯ ಮಾಡುತ್ತದೆ. ಈ ಪುಸ್ತಕವೇ ನಿಮ್ಮ ಉಪಧ್ಯಾಯ. ಇದು ನಿಮಗೆ ಕೆಲವು ಸಂಗತಿಗಳ ಕುರಿತು ತಿಳಿಸಿ ನಂತರ ಅವುಗಳ ಕುರಿತು ಪ್ರಶ್ನಿಸುತ್ತದೆ. ಪ್ರತಿಪಾಠಕ್ಕೂ ಇದು ನಿಮಗೆ ಮಾರ್ಗದರ್ಶನ ನೀಡುತ್ತದೆ.

ನೀವು ಹೋಗುವ ಕಡೆಯೆಲ್ಲಾ ಈ ಪುಸ್ತಕವನ್ನು ನೀವು ತೆಗೆದುಕೊಂಡು ಹೋಗಬಹುದು ಮತ್ತು ನಿಮಗೆ ಐದು ಅಥವಾ ಹತ್ತು ನಿಮಿಷಗಳ ಸಮಯ ಸಿಕ್ಕಿದಾಗಲೆಲ್ಲಾ ಇದನ್ನು ಅಭ್ಯಾಸಿಸಿರಿ. ಪೂರ್ಣ ಪಾಠವನ್ನು ಅಭ್ಯಾಸಿಸಬೇಕೆಂದು ಕಾಯಬೇಡಿರಿ. ನಿಮಗೆ ಸಾಧ್ಯವಾದದ್ದನ್ನು ಯಾವಾಗಲಾದರೂ, ಎಲ್ಲಿಯಾದರೂ ಮಾಡಿರಿ.

ಒಂದು ಅಭ್ಯಾಸ ಪುಸ್ತಕದಂತೆ ಈ ಪುಸ್ತಕವನ್ನು ಬರೆಯಲಾಗಿದೆ. ಒಂದು ವೇಳೆ ಈ ಪುಸ್ತಕ ನಿಮಗೆ ಬೇರೆಯವರಿಂದ ಸಿಕ್ಕಿದ್ದರೆ ನೀವು ಈ ಪುಸ್ತಕವನ್ನು ತಿರಿಗಿ ಉಪಯೋಗಿಸಬೇಕಾದರೆ ಒಂದು ಪ್ರತ್ಯೇಕವಾದ ಹಾಳೆಯಲ್ಲಿ ನಿಮ್ಮ ಉತ್ತರಗಳನ್ನು ಬರೆಯಿರಿ.



## ನೀವು ಮಾಡಬೇಕಾದದ್ದು

ಸರಿಯಾದ ಉತ್ತರವನ್ನು ಆರಿಸಿಕೊಳ್ಳಿರಿ ಮತ್ತು ಅದರ ಪಕ್ಕದಲ್ಲಿ 'X' ಈ ಗುರುತನ್ನು ಹಾಕಿರಿ. ಉದಾಹರಣೆಗಾಗಿ:

1. ಯಾವ ತರವಾದ ಪುಸ್ತಕವಿದು?

X ಅ) ವಿಶೇಷ

..... ಆ) ಸಾಮಾನ್ಯ

2. ಇದು ನಿಮಗೆ ಸಹಾಯ ಮಾಡುವ ಸ್ವ-ಶಿಕ್ಷಕ ಪುಸ್ತಕವಾಗಿದೆ.

...ಅ) ತರಗತಿಯಲ್ಲಿ ಕಲಿಸುವುದಕ್ಕೆ

...ಆ) ನೀವು ಇರುವ ಕಡೆಯಲ್ಲಿ ಅಭ್ಯಾಸಿಸುವುದಕ್ಕೆ

ಶಿಕ್ಷಕನಂತೆ ನಿಮ್ಮ ಈ ಪುಸ್ತಕವು ನಿಮ್ಮ ಉತ್ತರಗಳು ಸರಿಯೋ ಅಥವಾ ತಪ್ಪೋ ಎಂಬುದನ್ನು ನೋಡುವಂತೆ ಮಾಡುತ್ತದೆ. ಮೇಲಿನ ಪ್ರಶ್ನೆಗಳಲ್ಲಿ ನೀವು ಈ ಪದಗಳನ್ನು ಆರಿಸಬೇಕು. ಅ) ವಿಶೇಷ ಆ) ನೀವು ಇರುವ ಕಡೆಯಲ್ಲಿ ಅಭ್ಯಾಸಿಸುವುದಕ್ಕೆ

ಪ್ರಶ್ನೆಗಳು ಪಾಠಗಳ ಕೊನೆಯಲ್ಲಿ ಇರುವುದಕ್ಕೆ ಬದಲಾಗಿ ಪಾಠಗಳಲ್ಲಿ ಇರುತ್ತವೆ.

ಪ್ರಶ್ನೆಗಳು ಮತ್ತು ನಿಮ್ಮ ಉತ್ತರಗಳು:

★ ಚಂಚಲತೆಯಿಂದ ನಿಮ್ಮ ಯೋಚನೆಗಳು ದೂರವಿಡಿರಿ

★ ನೀವು ಈಗ ತಾನೇ ಓದಿದ್ದರಿಂದ ತಿಳಿದುಕೊಂಡಿದೆಷ್ಟೆಂದು ಪರೀಕ್ಷಿಸಿರಿ.

★ ಪಾಠದ ಮುಖ್ಯಾಂಶಗಳನ್ನು ನೆನಪಿನಲ್ಲಿಡಿರಿ.

ನೀವು ಮಾಡಬೇಕಾದದ್ದು ಎಂಬುದರ ಕೆಳಗೆ ನೀವು ಉತ್ತರಗಳನ್ನು ಕಾಣುವಿರಿ. ನಿಮ್ಮ ಸ್ವಂತ ಉತ್ತರಗಳನ್ನು ಬರೆಯುವ ಮೊದಲು ಅವುಗಳನ್ನು ನೋಡಬೇಡಿರಿ. ನೀವು ಉತ್ತರಿಸುವ ಮೊದಲು ಒಂದು ಹಾಳೆಯ ತುಂಡನ್ನು ಅದರ ಮೇಲೆ ಮುಚ್ಚಿಕೊಂಡು ಉತ್ತರಿಸಿರಿ. ನಂತರ ಆ ಉತ್ತರಗಳೊಂದಿಗೆ ನಿಮ್ಮ ಉತ್ತರಗಳನ್ನು ಹೋಲಿಸಿರಿ.

### ನೀವು ಮಾಡಬೇಕಾದದ್ದು

ಸರಿಯಾದ ಉತ್ತರವನ್ನು ಆರಿಸಿಕೊಳ್ಳಿರಿ. ಮತ್ತು ಅದರ ಪಕ್ಕದಲ್ಲಿ X ಗುರುತನ್ನು ಹಾಕಿರಿ.

3. ಈ ಪ್ರಶ್ನೆಗಳು ಮತ್ತು ಉತ್ತರಗಳು ನಿಮ್ಮನ್ನು ಪರೀಕ್ಷಿಸುತ್ತವೆ.

...ಅ) ನೀವು ಈಗ ತಾನೇ ಓದಿದ್ದನ್ನು ಎಷ್ಟು ತಿಳಿದುಕೊಂಡಿ ದ್ದೀರೆಂದು

...ಆ) ವಿಷಯದ ಕುರಿತಾದ ಸಾಮಾನ್ಯ ಜ್ಞಾನ.

ಉತ್ತರ 3 ಅ) ನೀವು ಈಗ ತಾನೇ ಓದಿದ್ದನ್ನು ಎಷ್ಟು ತಿಳಿದುಕೊಂಡಿ ದ್ದೀರೆಂದು ಕೆಲವು ಸಾರಿ ಈ ಪುಸ್ತಕವು ಪ್ರಶ್ನೆಗಳಿಗೆ ಉತ್ತರಿಸುವುದಲ್ಲದೆ ಬೇರೆಯದನ್ನು ಮಾಡಲು ತಿಳಿಸುತ್ತದೆ. ಈ ಅಭ್ಯಾಸದ ಉದ್ದೇಶ ನೀವು ಪಾಠಗಳನ್ನು ಸರಿಯಾಗಿ ಕಲಿಯಬೇಕೆಂದು. ಆದ್ದರಿಂದ ಇವೆಲ್ಲವುಗಳನ್ನು ಮಾಡಿರಿ.

ಈ ಪುಸ್ತಕ ಹೊಸಜೀವಿತದ ಕುರಿತು ತಿಳಿಸುತ್ತದೆ. ಅದು ನಿಮಗೆ ಆಶ್ಚರ್ಯಕರವಾದ ಸಹಾಯವನ್ನು ಮತ್ತು ಆಶೀರ್ವಾದವನ್ನು ಕೊಡುತ್ತದೆ. ಇದು ಈಗಾಗಲೇ ಸಾವಿರಾರು ವಿದ್ಯಾರ್ಥಿಗಳಿಗೆ ಸಹಾಯಕರವಾಗಿದೆ. ಆದ್ದರಿಂದ, ನೀವು ಇದರಲ್ಲಿ ಕಲಿತದ್ದನ್ನು ಈಗಲೇ ಕಾರ್ಯತಃ ಮಾಡಿರಿ.

**ನಿಮ್ಮ ಉತ್ತರ ಪತ್ರಿಕೆ**

ಒಂದು ವೇಳೆ ನೀವು ಒಂದು ಯೋಗ್ಯತಾ ಪತ್ರಕ್ಕಾಗಿ ಅಭ್ಯಾಸಿಸುತ್ತಿರುವುದಾದರೆ, ಪುಸ್ತಕದ ಕೊನೆಯಲ್ಲಿರುವ ಉತ್ತರ ಪತ್ರಿಕೆಯಲ್ಲಿ ಕೊಟ್ಟ ಸಲಹೆಗಳನ್ನು ಅನುಸರಿಸಿರಿ ಮತ್ತು ಐ.ಸಿ.ಐ. ಕಛೇರಿಗೆ ಕಳುಹಿಸಿರಿ. ನೀವು ಹೀಗ ಮಾಡುವುದಾದರೆ ನಿಮಗೆ ಒಂದು ಸುಂದರವಾದ ಯೋಗ್ಯತಾ ಪತ್ರ ಸಿಕ್ಕುವುದು.

---

**ಪ್ರಾರ್ಥನೆ**

ದೇವರೇ ಹೊಸ ಜೀವಿತದ ಈ ಪಾಠಗಳಿಗೆ ನಿನಗೆ ಸ್ತೋತ್ರ, ನಾನು ಸರಿಯಾಗಿ ಕಲಿಯುವಂತೆ ಸಹಾಯಮಾಡು. ಯೇಸುವಿನ ನಾಮದಲ್ಲಿ ಆಮೆನ್

---